

ಕಾಲಿಗೆ ಎಕ್ಕಡವನ್ನು ಹಾಕಿಕೊಂಡ ಮೇಲೆ ನೀವು ಸುಲಭವಾಗಿ ಮುಳ್ಳಿನ ಮೇಲೆ ನಡೆಯಬಹುದು. ಆಧ್ಯಾತ್ಮಿಕಜ್ಞಾನದಿಂದ ಕೂಡಿದ ಮೇಲೆ ಮುಳ್ಳಿನಂತೆ ಇರುವ ಪ್ರಪಂಚದ ಮೇಲೆ ನಿರಾತಂಕವಾಗಿ ನಡೆಯಬಹುದು.

ಸೂರ್ಯ ಅಥವಾ ಚಂದ್ರ ಚಂಚಲವಾಗಿರುವ ನೀರಿನಲ್ಲಿ ಪ್ರತಿಬಿಂಬಿಸುವುದಿಲ್ಲ. ಅದರಂತೆಯೇ ಮಾಯೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವ ತನಕ, ಅಂದರೆ ನಾನು, ನನ್ನದು ಎಂಬ ಭಾವ ಹೋಗದೆ ಇರುವ ತನಕ ಈಶ್ವರನನ್ನು ನಾವು ಕಾಣಲಾರೆವು.

ಪ್ರಪಂಚದಲ್ಲಿ ಹೇಗೆ ಅನಾಸಕ್ತವಾಗಿರುವುದು ನಿಮಗೆ ಗೊತ್ತೆ? ಒಬ್ಬನು ಕೆಸರಿನಲ್ಲಿರುವ ಮೀನಿನಂತೆ ಇರಬೇಕು. ಆ ಮೀನು ಕೆಸರಿನಲ್ಲಿ ಇರುವುದು. ಆದರೆ ಕೆಸರಿನಿಂದ ಅದು ಕೊಳೆಯಾಗುವುದಿಲ್ಲ.

ನೀರಿನ ತಪ್ಪಲೆಯಲ್ಲಿ ಒಂದು ಸಣ್ಣ ತೂತು ಇದ್ದರೆ ಅದರಿಂದ ಕ್ರಮೇಣ ನೀರು ಸೋರಿಹೋಗುವುದು. ಇದರಂತೆ ಸಾಧಕನಲ್ಲಿ ಏನಾದರೂ ಸ್ವಲ್ಪ ಪ್ರಾಪಂಚಿಕತೆಯ ಸೋಂಕು ಇದ್ದರೂ ಅವನ ಪ್ರಯತ್ನವೆಲ್ಲಾ ನಿಷ್ಫಲವಾಗುವುದು.

ಶ್ರೀರಾಮಕೃಷ್ಣ

# ಪ್ರಾರ್ಥನೆ

ತ್ರಯೀ ಸಾಂಖ್ಯಂ ಯೋಗಃ
ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರಮಿದ–
ಮದಃ ಪಥ್ಯಮಿತಿ ಚ |
ರುಚೀನಾಂ ವೈಚಿತ್ರ್ಯಾದ್
ಋಜುಕುಟಿಲನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ
ಪಯಸಾಮರ್ಣವ ಇವ ||

(ಶಿವಮಹಿಮ್ನಃ ಸ್ತೋತ್ರಮ್.೭)

ನಿನ್ನನ್ನು ಸೇರುವ ದಾರಿಯು ವೈದಿಕ, ಸಾಂಖ್ಯ ಯೋಗ, ಪಾಶುಪತ, ವೈಷ್ಣವ ಎಂದು ಬೇರೆ ಬೇರೆಯಾಗಿವೆ. ರುಚಿಗಳ ವೈವಿಧ್ಯದಿಂದ ಇದು ಶ್ರೇಷ್ಠ, ಇದು ಹಿತ ಎಂದು ನೇರ ಮತ್ತು ವಕ್ರವಾಗಿರುವ ಬೇರೆ ಬೇರೆ ಮಾರ್ಗಗಳಲ್ಲಿ ಜನರು ಹೋಗುತ್ತಾರೆ. ಅವರೆಲ್ಲರಿಗೂ ನದಿಗಳಿಗೆ ಸಮುದ್ರದಂತೆ, ನೀನೊಬ್ಬನೆ ಗಮ್ಯಸ್ಥಾನವಾಗಿದ್ದೀಯೆ.

ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿಂಧುಪಾತ್ರಂ
ಸುರತರುವರಶಾಖಾ ಲೇಖನೀ ಪತ್ರಮುರ್ವೀ |
ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ
ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ||

(ಶಿವಮಹಿಮ್ನಃ ಸ್ತೋತ್ರಮ್.೩೨)

ಈಶ್ವರನೆ, ಸಮುದ್ರವನ್ನೇ ಮಸಿಕುಡಿಕೆಯಾಗಿಸಿಕೊಂಡು, ನೀಲಾಚಲದಷ್ಟು ಮಸಿಯನ್ನಿಟ್ಟುಕೊಂಡು, ಕಲ್ಪವೃಕ್ಷದ ಕೊಂಬೆಯನ್ನೇ ಲೇಖನಿಯಾಗಿ ಹಿಡಿದುಕೊಂಡು ಇಡೀ ಭೂಮಂಡಲವೆಂಬ ಪತ್ರದ ಮೇಲೆ, ಸ್ವತಃ ವಾಗ್ದೇವಿಯೇ ಎಲ್ಲ ಕಾಲವೂ ಬರೆದರೂ ನಿನ್ನ ಗುಣಗಳ ಸೀಮೆಯನ್ನು ಮುಟ್ಟಲಾಗುವುದಿಲ್ಲ.

ತವ ತತ್ತ್ವಂ ನ ಜಾನಾಮಿ
ಕೀದೃಶೋऽಸಿ ಮಹೇಶ್ವರ |
ಯಾದೃಶೋऽಸಿ ಮಹಾದೇವ
ತಾದೃಶಾಯ ನಮೋ ನಮಃ ||

(ಶಿವಮಹಿಮ್ನಃ ಸ್ತೋತ್ರಮ್.೪೧)

ಪರಮೇಶ್ವರನೆ, ನೀನು ಯಾವ ರೂಪದವನೆಂಬ ನಿನ್ನ ನಿಜವಾದ ತತ್ತ್ವವನ್ನರಿಯೆನು. ನಿನ್ನ ಸ್ವರೂಪವು ಯಾವುದಾದರೂ ಸರಿಯೆ, ಆ ಸ್ವರೂಪದವನಾದ ನಿನಗೆ ಪುನಃ ಪುನಃ ನಮಸ್ಕಾರಗಳು.